ಇ) ಐದು ಎಕರೆಗಳಿಗಿಂತ ಕಡಿಮೆ ಜಮೀನಿರುವ ರೈತರಿಗೆ ಸಹಾಯ ಮಾಡುವ ದೃಷ್ಟಿಯಿಂದ ಸರ್ಕಾರವು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ನಿರ್ಣಯವನ್ನು ಪರಿಷ್ಕರಿಸಲು ನಿರ್ದೇಶನ ನೀಡುವುದೇ ?

ಶ್ರೀ ಲಕ್ಷ್ಮೀನರಸಿಂಹಯ್ಯ (ರಾಜ್ಯ ವಿದ್ಯುತ್ ಮಂತ್ರಿಗಳು).—

ಅ) ಇಲ್ಲ.

ಆ) ಮತ್ತು ಇ) ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀ ಕೆ. ವಿ. ರವೀಂದ್ರನಾಥ ಬಾಬು.—ಮಾನ್ಯ ಮಂತ್ರಿಗಳು 'ಇಲ್ಲ, ಉದ್ಭವಿಸುವುದಿಲ್ಲ.' ಎಂದು ಉತ್ತರ ಕೊಟ್ಟಿದ್ದಾರೆ. ಕೂಡ್ಲಿಗಿ ತಾಲ್ಲೂಕಿನಲ್ಲಿ ಸ್ಮಾಲ್ ಫಾರ್ಮರ್ಸ್‌ಗೆ ಪವರ್ ಕನೆಕ್ಷನ್ ಕೊಡದೆ ಪೆಂಡಿಂಗ್ ಇದೆ. ಕಾರಣವೇನೆಂದರೆ ಕ್ಲಾರಿಫಿಕೇಷನ್‌ಗೆ ಬಂದಿದೆ. ೩-೪ ತಿಂಗಳಿಂದ ಇದು ಪೆಂಡಿಂಗ್ ಇದೆ. ಆದುದರಿಂದ ಆದಷ್ಟು ಬೇಗ ಕ್ಲಾರಿಫಿಕೇಷನ್‌ನನ್ನು ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್‌ಗೆ ಕಳಿಸಿಕೊಟ್ಟರೆ ಪವರ್ ಕನೆಕ್ಷನ್ ಕೊಡಬಹುದು, ಇದರಿಂದ ರೈತರಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀನರಸಿಂಹಯ್ಯ.—ಮಾನ್ಯ ಅಧ್ಯಕ್ಷರೆ, ಇದರಲ್ಲಿ ದೊಡ್ಡ ರೈತರು ಸಣ್ಣ ರೈತರ ಪ್ರಶ್ನೆಯಿಲ್ಲ. ಎಕರೆವಾರು ಜಮೀನಿಗೂ ಹಾರ್ಸ್ ಪವರಿಗೂ ಸಂಬಂಧವಿಲ್ಲ. ಆ ರೀತಿ ನಿರ್ದೇಶನವನ್ನು ಕೂಡ ನಾವು ಕೊಟ್ಟಿಲ್ಲ. ಇದನ್ನು ಏತಕ್ಕೆ ತಡೆಹಿಡಿದಿದ್ದಾರೆ ಎನ್ನುವುದಕ್ಕೆ ಕಾರಣ ಗೊತ್ತಿಲ್ಲ. ಬಹುಶಃ ತಪ್ಪು ತಿಳುವಳಿಕೆಯಿಂದ ತಡೆಹಿಡಿದಿದ್ದರೆ, ಸೂಕ್ತ ತಿಳುವಳಿಕೆ ಕೊಟ್ಟು ತಕ್ಷಣ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಹೊಸದುರ್ಗ ತಾಲ್ಲೂಕಿನಲ್ಲಿ ಶ್ರೀಗಂಧದ ಮರಗಳ ಕಳ್ಳ ಸಾಗಾಣಿಕೆ ಪ್ರಕರಣಗಳು

೧೩೭೦. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿತ್ರದುರ್ಗ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಅಕ್ರಮವಾಗಿ ಸಾಗಿಸುತ್ತಿದ್ದ ಶ್ರೀ ಗಂಧದ ಮರವನ್ನು ವಶಪಡಿಸಿಕೊಂಡಿರುವ ಪ್ರಕರಣಗಳ ಸಂಖ್ಯೆ ಎಷ್ಟು ?

ಆ) ಹಾಗಿದ್ದಲ್ಲಿ ಹೊಸದುರ್ಗ ತಾಲ್ಲೂಕಿನಲ್ಲಿ ಅಕ್ರಮವಾಗಿ ಶ್ರೀ ಗಂಧವನ್ನು ಕಳ್ಳಸಾಗಾಣಿಕೆ ಮಾಡುತ್ತಿದ್ದ ಪ್ರಕರಣಗಳೆಷ್ಟು ?

ಇ) ಸರ್ಕಾರವು ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು ಹಾಗೂ ದೊರೆತ ಶ್ರೀಗಂಧದ ಪ್ರಮಾಣವೆಷ್ಟು ? ಹಾಗೂ ಇದರ ಮೌಲ್ಯವೆಷ್ಟು ?

ಈ) ಇತ್ತೀಚೆಗೆ ಹೊಸದುರ್ಗ ತಾಲ್ಲೂಕಿನ ಮಾಡದ ಕೆರೆ ಹೋಬಳಿ, ಡಿ. ಮಲ್ಲಾಪುರ ಗ್ರಾಮದಲ್ಲಿ ಗ್ರಾಮದ ಜನರಿಂದ ಪತ್ತೆಯಾದ ಅಕ್ರಮ ಶ್ರೀಗಂಧದ ಸಾಗಾಣಿ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮ ಏನು ? ಹಾಗೂ ಅಲ್ಲಿ ದೊರೆತ ಶ್ರೀ ಗಂಧದ ಪ್ರಮಾಣವೆಷ್ಟು ? ಮತ್ತು, ಅದರ ಮೌಲ್ಯವೆಷ್ಟು ?

ಶ್ರೀ ಜಿ. ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

	ವರ್ಷ	ಪ್ರಕರಣಗಳು
ಅ)	೧೯೮೬-೮೭	೫
	೧೯೮೭-೮೮	೬
ಆ)	೧೯೮೬-೮೭	೧
	೧೯೮೭-೮೮	೩

ಇ) ಹೊಸದುರ್ಗ ತಾಲ್ಲೂಕಿನಲ್ಲಿ ವಶಪಡಿಸಿಕೊಂಡ ಗಂಧದ ಪ್ರಮಾಣ ಮತ್ತು ಮೌಲ್ಯ ಈ ಕೆಳಕಂಡಂತಿದೆ.

ವರ್ಷ	ಗಂಧ ಪ್ರಮಾಣ ಕೆ.ಜಿ. ಯಲ್ಲಿ	ಮೌಲ್ಯ ರೂ.
೧೯೮೬-೮೭	೭೭೩	೪೧,೬೨೦-೦೦
೧೯೮೭-೮೮	೧೨೩೭	೬೫,೭೬೦-೦೦

ಈ ಪ್ರಕರಣದಲ್ಲಿ ಕಳ್ಳ ಸಾಗಾಣಿಕೆಯಲ್ಲಿ ತೊಡಗಿದ ಒಂದು ಜೀಪು ವಶಪಡಿಸಿಕೊಂಡು ಪ್ರಕರಣವನ್ನು ದಾಖಲು ಮಾಡಿ ಒಬ್ಬ ಅಪರಾಧಿಯನ್ನು ಬಂಧಿಸಿ ಮೊಕದ್ದಮೆ ಹೂಡಲಾಗಿದೆ.

ಈ) ಗ್ರಾಮದ ಜನರ ಸಹಾಯದಿಂದ ಕಳ್ಳಸಾಗಾಣಿಕೆಯಲ್ಲಿ ನಿರತವಾದ ಒಂದು ಜೀಪನ್ನು ವಶಪಡಿಸಿಕೊಂಡು ಅಕ್ರಮವಾಗಿ ಸಾಗಿಸುತ್ತಿದ್ದ ೫೪೭ ಕೆ. ಜಿ. ಗಂಧವನ್ನು ವಶಪಡಿಸಿಕೊಳ್ಳಲಾಗಿದೆ. ಇದರ ಮೌಲ್ಯ ೩೦,೦೦೦ ರೂ. ಇರುತ್ತದೆ. ಈ ವಿಷಯದಲ್ಲಿ ಕಳ್ಳ ಸಾಗಾಣಿಕೆಯಲ್ಲಿ ತೊಡಗಿದ ಒಬ್ಬ ವ್ಯಕ್ತಿಯನ್ನು ಬಂಧಿಸಿ ಮೊಕದ್ದಮೆ ಹೂಡಲಾಗಿದೆ.

ಶ್ರೀ ಜಿ. ರಾಮದಾಸ್.—ಮಾನ್ಯ ಅಧ್ಯಕ್ಷರೆ, ೧೯೮೬-೮೭ ಮತ್ತು ೧೯೮೭-೮೮ ಈ ಎರಡು ವರ್ಷಗಳಲ್ಲಿ ನಾಲ್ಕು ಪ್ರಕರಣಗಳು ಆಗಿದ್ದು, ಸೂರಾರು ಗಂಧದ ಮರಗಳನ್ನು ಅಕ್ರಮವಾಗಿ ಕಳ್ಳ ಸಾಗಾಣಿಕೆ ಮಾಡಿದ್ದಾರೆ. ಕಡಿದಂತ ಮರಗಳ ಜಾಗದಲ್ಲಿ ಕೆಳಗಡೆ ಭೂಮಿಯಲ್ಲಿ ಬೇರುಗಳು ಇದ್ದು ಅವುಗಳನ್ನು ಕೂಡ ಕಳ್ಳಸಾಗಾಣಿಕೆಯಲ್ಲಿ ಕದ್ದು ಪೂರಾಟ ಮಾಡುತ್ತಿದ್ದಾರೆ. ಅದನ್ನು ಕೂಡ ಸರ್ಕಾರ ದವರೆ ವಶಪಡಿಸಿಕೊಂಡು ಇರತಕ್ಕ ಬೇರುಗಳನ್ನು ಅಗೆದು ತೆಗೆದುಕೊಂಡಬೇಕೆಂದು ಸಲಹೆ ಕೊಡುತ್ತೇನೆ.

ಶ್ರೀ ಜಿ. ಎಸ್. ಬಾಗಲ್‌ಕೋಟೆ.—ಮಾನ್ಯ ಸದಸ್ಯರ ಸಲಹೆ ಏನು ಇದೆ, ಆ ರೀತಿ ಕ್ರಮ ಕೈಗೊಳ್ಳುವುದಕ್ಕೆ ಅಧಿಕಾರಿಗಳಿಗೆ ಆದೇಶವನ್ನು ಕೊಡುತ್ತೇನೆ.

ಶ್ರೀ ಜಿ. ರಾಮದಾಸ್.—ಹೊಸದುರ್ಗ ತಾಲ್ಲೂಕಿನ ಮಾಡದ ಕೆರೆ ಹೋಬಳಿ ಡಿ. ಮಲ್ಲಾಪುರ ಗ್ರಾಮದ ಗ್ರಾಮಸ್ಥರು ಸುಮಾರು ೫೪೭ ಕೆ.ಜಿ. ಗಂಧವನ್ನು ಹಿಡಿದಿಟ್ಟಿದ್ದಾರೆ. ಇದು ನಡೆದ ಸಂದರ್ಭದಲ್ಲಿ ಮತ್ತೆ ೩೦೦ ಕೆ. ಜಿ. ಗಂಧ ಮಧ್ಯಾಹ್ನ ಮೂರು ಗಂಟೆಯೊಳಗಾಗಿ ಸಿಕ್ಕಿದೆ, ಈ ಗಂಧ ಏನಾಯಿತು ಎನ್ನುವುದನ್ನು ತಿಳಿಸಬೇಕು.

ಶ್ರೀ ಜಿ. ಎಸ್. ಬಾಗಲ್‌ಕೋಟೆ.—ಮಾನ್ಯ ಅಧ್ಯಕ್ಷರೆ, ಡಿ. ಮಲ್ಲಾಪುರದ ಜನರಿಗೆ ಧನ್ಯವಾದ ಗಳನ್ನು ಅರ್ಪಿಸಲೇ ಬೇಕು, ಬಹಳ ಒಳ್ಳೆಯ ಕಾರ್ಯವನ್ನು ಅವರು ಮಾಡಿದ್ದಾರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಇನ್ನೂ ೩೦೦ ಕೆ. ಜಿ. ಲೆಕ್ಕ ಬಂದಿಲ್ಲವೆಂದು ಹೇಳಿದ್ದಾರೆ. ಅದರ ಬಗ್ಗೆ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಜಿ. ರಾಮದಾಸ್.—ಹಿಡಿದಿಟ್ಟ ಜೀಪನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಅದನ್ನು ಇಲಾಖೆಗೆ ಬಿಟ್ಟುಕೊಟ್ಟರೆ ಇನ್ನು ಹೆಚ್ಚಿನ ಆಸಕ್ತಿಯಿಂದ ಕೆಲಸಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಜಿ. ಎಸ್. ಬಾಗಲ್‌ಕೋಟೆ.—ಸನ್ಮಾನ್ಯ ಸದಸ್ಯರ ಸೂಚನೆಯನ್ನು ಪರಿಶೀಲಿಸುತ್ತೇನೆ.

ಅರಣ್ಯ ಇಲಾಖೆಯಲ್ಲಿ ಸಸಿಗಳನ್ನು ಬೆಳೆಸುತ್ತಿರುವುದು

೧೯೯೦. ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಅರಣ್ಯ ಇಲಾಖೆಯು ಸಸಿಗಳನ್ನು ಬೆಳೆಸುತ್ತಿರುವುದು ನಿಜವಾಗಿರುತ್ತದೆಯೇ ?

ಆ) ರಾಜ್ಯದಲ್ಲಿ ಅರಣ್ಯ ಇಲಾಖೆಯು ಸಸಿಗಳನ್ನು ಬೆಳೆಸುತ್ತಿರುವ ಒಟ್ಟು ಸಸ್ಯ ಕ್ಷೇತ್ರಗಳೆಷ್ಟು?

ಇ) ಈ ವರ್ಷ ಒಟ್ಟು ಬೆಳೆಸಿದ ಸಸಿಗಳ ಸಂಖ್ಯೆ ಎಷ್ಟು (ಜಾತಿಗಳ ವಿವರಣೆ ಒಳಗೂಡಿ)